**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**<u>ಸಿ.ಸಿ.ನಂ.1540/2022</u>**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ 1 ಶ್ರೀನಿವಾಸ ಕುಪ್ಪಿ ಶೆಟ್ಟಿ ತಂದೆ ವಿರಮಶೆಟ್ಟಿ
ವಃ 42 ವರ್ಷ, ಉಃ ರಾಜಶ್ರೀ ಫ್ಯಾಕ್ಟರಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರ
ಸಾಃ ಚಿರತಪುಡಿ ಗ್ರಾಮ, ಅಂಬಾಜಿಪೇಟಾ ಮಂಡಲ,
ತಾಃ ಅಮಲಾಪುರಂ, ಜಿಃ ಈಸ್ಟ ಗೋದಾವರಿ (ಎಪಿ)
ಹಾ.ವಃ ಎನ್-50 ಆದಿತ್ಯನಗರ ಮಳಖೇಡ

2 ಗೋಪಾಲ ತಂದೆ ದೇವಲಾ ರಾಠೋಡ
ವಃ 52 ವರ್ಷ, ಉಃ ರಾಜಶ್ರೀ ಫ್ಯಾಕ್ಟರಿಯಲ್ಲಿ ಕಾಂಟ್ರಾಕ್ಟರ ಕೆಲಸ
ಸಾಃ ಸ್ಟೇಷನ ತಾಂಡಾ ಚಿತ್ತಾಪೂರ, ಜಿಃ ಕಲಬುರಗಿ

3. ಬ್ರಿಜ್ ಮೋಹನ ಚೌದರಿ ತಂದೆ ನೇಮಿಚಂದ ಚೌಧರಿ
ವಃ 29 ವರ್ಷ, ಉಃ ರಾಜಶ್ರೀ ಫ್ಯಾಕ್ಟರಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರ
ಸಾಃ ಮಿಂಡಾಸಿರಿ ಗ್ರಾಮ, ಪೋಸ್ಟ- ಸಿಂಘಾನಾ
ತಾಃ ಲಾಡನೂನ ಜಿಃ ನಾಗೋರ ರಾಜಸ್ಥಾನ ರಾಜ್ಯ
ಹಾವನ್ಯೂ ಹೆಚ್ ಆರ 16/8 ಆದಿತ್ಯ ನಗರ ಮಳಖೇಡ

-----

**<u>ಆಪಾದನೆ</u>**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 28-06-2022 ರಂದು 02.00 ಎ.ಎಮ್. ಗಂಟೆ ಸುಮಾರಿಗೆ ಮಳಖೇಡ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ರಾಜಶ್ರೀ ಸಿಮೆಂಟ ಫ್ಯಾಕ್ಟರಿಯ 4 ನೇ ಪ್ರಾಂಟನಲ್ಲಿ ಚಾಸಾ.1 ನೇದ್ದವರ ಗಂಡನಾದ ಮೃತ ಸಂಜಯಕುಮಾರ ತಂದೆ ದೇವಿಂದರಪ್ಪ ಏವೂರ ಈತನು ಕೆಲಸ ಮಾಡುತ್ತಿರುವಾಗ ಆರೋಪಿತರಾದ ನೀವು ಸಮಾನೋದ್ದೇಶದಿಂದ ಕೂಡಿಕೊಂಡು ಸಂಜಯಕುಮಾರ ಈತನಿಗೆ ರಾಜಶ್ರೀ ಸಿಮೆಂಟ ಫ್ಯಾಕ್ಟರಿಯ 4 ನೇ ಪ್ಲಾಂಟನ ಕ್ಲಿಂಕರ ಸೈಲೋ ಕನ್ವೇಯರ ಬೆಲ್ಟನಲ್ಲಿ ಯಾವುದೇ ಸುರಕ್ಷತೆ ಒದಗಿಸದೆ ಮತ್ತು ಯಾವುದೇ ಸುರಕ್ಷತಾ ಸಲಕರಣೆಗಳನ್ನು ನೀಡದೇ ಅಲಕ್ಷತನದಿಂದ ಯಂತ್ರಗಳಲ್ಲಿ ಕೆಲಸಕ್ಕೆ ಹಚ್ಚಿದ್ದರಿಂದ ಕೆಲಸ ಮಾಡುವಾಗ ಸಂಜಯಕುಮಾರ ಈತನು ಕ್ಲಿಂಕರ ಸೈಲೋ ಬೆಲ್ಟನಲ್ಲಿ ಬಿದ್ದು ಅದರ ಡ್ರಮ್ನಲ್ಲಿ ಸಿಕ್ಕಿಬಿದ್ದು ತಲೆಗೆ ಮತ್ತು ಇತರ ಕಡೆಗೆ ಭಾರಿ ರಕ್ತಗಾಯಗಳಾಗಿದ್ದು, ಕಾರಣ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.287 ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಕೂಡಿಕೊಂಡು, ಯಾವುದೇ ಸುರಕ್ಷತಾ ಸಲಕರಣೆಗಳನ್ನು ನೀಡದೇ ಅಲಕ್ಷತನದಿಂದ ಯಂತ್ರಗಳಲ್ಲಿ ಕೆಲಸಕ್ಕೆ ಹಚ್ಚಿ ದ್ದರಿಂದ, ಕೆಲಸ ಮಾಡುವಾಗ ಸಂಜಯಕುಮಾರ ಈತನು ಕ್ಲಿಂಕರ ಸೈಲೋ ಬೆಲ್ಟನಲ್ಲಿ ಬಿದ್ದು ಅದರ ಡ್ರಮ್ನಲ್ಲಿ ಸಿಕ್ಕಿಬಿದ್ದು ತಲೆಗೆ ಮತ್ತು ಇತರ ಕಡೆಗೆ ಭಾರಿ ರಕ್ತಗಾಯಗಳಾಗಿ ಮೃತಪಟ್ಟಿದ್ದು, ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.304(ಎ) ಸಂಗಡ 34 ಅಡಿಯಲ್ಲಿ ಶಿಕ್ಷಾ ರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ಸಹಿ/-

ದಿನಾಂಕ 23-07-2026 ಪ್ರ.ದ.ನ್ಯಾ .ದಂ. ಸೇಡಂ.

**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.1540/2022**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ 1.: ಶ್ರೀನಿವಾಸ ಕುಪ್ಪಿ ಶೆಟ್ಟಿ ತಂದೆ ವಿರಮಶೆಟ್ಟಿ
ವಃ 42 ವರ್ಷ, ಉಃ ರಾಜಶ್ರೀ ಫ್ಯಾಕ್ಟರಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರ
ಸಾಃ ಚಿರತಪುಡಿ ಗ್ರಾಮ, ಅಂಬಾಜಿಪೇಟಾ ಮಂಡಲ,
ತಾಃ ಅಮಲಾಪುರಂ, ಜಿಃ ಈಸ್ಟ ಗೋದಾವರಿ (ಎಪಿ)
ಹಾ.ವಃ ಎನ್-50 ಆದಿತ್ಯನಗರ ಮಳಖೇಡ
ಹಾಗೂ ಇತರರು

**ಆವಾದನೆ**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ-ಆ-1

ಆ-2

ಆ-3

ಪ್ರಃ-2) ನೀನು ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-ಆ-1

ಆ-2

ಆ-3

ಸಹಿ/-

ದಿನಾಂಕಃ 23-07-2026 ಪ್ರ.ದ.ನ್ಯಾ.ದಂ. ಸೇಡಂ.